ಒಮ್ಮೆ ಭೋಜರಾಜನು ಕವಿಶ್ರೇಷ್ಠನೊಡನೆ ವೇಷ ಮರೆಸಿಕೊಂಡು ಊರು ಸುತ್ತುತ್ತಿದ್ದನು. ಮಧ್ಯದಲ್ಲಿ ದಾರಿ ತಪ್ಪಿತು. ಅಲ್ಲೇ ಹತ್ತಿರದಲ್ಲಿದ್ದ ಮುದುಕಿಯೊಬ್ಬಳನ್ನು "ಈ ದಾರಿ ಎಲ್ಲಿಗೆ ಹೋಗುತ್ತದೆ" ಎಂದು ಕೇಳಿದರು.

"ಈ ದಾರಿ ಎಲ್ಲಿಗೂ ಹೋಗುವುದಿಲ್ಲ. ಯಾತ್ರಿಗಳು ಈ ದಾರಿಯಲ್ಲಿ ಹೋಗುವರು. ನೀವಾರು?" ಎಂದು ಕೇಳಿದಳು ಮುದುಕಿ.

"ನಾವು ಯಾತ್ರಿಕರು."

"ಓಹೊ. ಯಾತ್ರಿಕರು ಇಬ್ಬರೇ—ಸೂರ್ಯ ಮತ್ತು ಚಂದ್ರ. ಅವರಲ್ಲಿ ನೀವಾರು?"

"ನಾವು ಅತಿಥಿಗಳು."

"ಊಹೂಂ, ಅತಿಥಿಗಳೂ ಇಬ್ಬರು— ಧನ ಮತ್ತು ಯೌವನ. ನೀವಾರು?"

"ಸರಿ, ನಾನು ರಾಜನಾಗಿದ್ದೇನೆ" ಎಂದನು ರಾಜ.

"ರಾಜರೂ ಇಬ್ಬರೇ—ಇಂದ್ರ ಮತ್ತು ಯಮ."

"ನಾವು ಕ್ಷಮಾವಂತರು."


"ಅವರಿಬ್ಬರೇ—ಭೂಮಿ ಮತ್ತು ನಾರಿ. ನೀವಾರು?"

"ನಾವು ಪರದೇಶಿಗಳು."

"ಪರದೇಶಿಗಳು ಇಬ್ಬರಿದ್ದಾರೆ— ಜೀವ ಮತ್ತು ವೃಕ್ಷದ ಎಲೆ."

"ಸರಿ, ನಾವು ಸೋತೆವು" ಎಂದನು ರಾಜ.

"ಸೋಲುವವರು ಇಬ್ಬರು—ಸಾಲಗಾರ ಮತ್ತು ವಧುವಿನ ತಂದೆ. ನಾನೇ ಹೇಳುತ್ತೇನೆ, ನೀವು ಯಾರೆಂದು—ನೀನು ರಾಜ, ಇವನು ಕವಿ. ಈ ಎದುರಿಗಿರುವ ದಾರಿಯಿಂದ ನೀವು ಉಜ್ಜೈನಿ ರಾಜ್ಯವನ್ನು ತಲುಪಬಹುದು" ಎಂದಳು ಮುದುಕಿ. ☆




ಕಲೆ : ಪುರುಷೋತ್ತಮ ಕಾರಂತ